O.S 253/2020
PW-1

ದಿ. 22.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್ ವಿ ವಿ ರವರಿಂದಃ-**

1. ಕ್ಯಾತ್ಯಯಿಣಿ ಎನ್ನುವವರು ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ದಾವೆಯನ್ನು ನಾನು ಸರ್ವೆ ನಂ.17 ರಲ್ಲಿ 1 ಎಕರೆ 35 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹೂಡಿರುತ್ತೇನೆ. ದಾವಾ ಸ್ವತ್ತು ಅಲ್ಲದೇ ಈ ಮೊದಲಿಗೆ ನಿಮ್ಮ ತಂದೆ ಹೆಸರಿಗೆ ಬೇರೆ ಸ್ವತ್ತುಗಳು ಸಹ ಇದ್ದವು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಮೊದಲಿಗೆ ಇದ್ದವು ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ತಮ್ಮ ಜೀವಿತಾವಧಿಯಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದರು.

2. ನಮ್ಮ ತಂದೆಯವರಿಗೆ ನಾನು ಸೇರಿ ಒಟ್ಟು 9 ಜನ ಮಕ್ಕಳು ಎಂದರೆ ಸರಿ. ನಮ್ಮ ತಂದೆಯವರು ತಮ್ಮ 6 ಜನ ಹೆಣ್ಣು ಮಕ್ಕಳ ಮದುವೆ ಕಾರ್ಯಕ್ರಮವನ್ನು ತಮ್ಮ ಜೀವಿತಾವಧಿಯಲ್ಲಿಯೇ ಮಾಡಿದ್ದರು ಎಂದರೆ ಸರಿ. ನಿಮ್ಮ ತಂದೆಯವರು 6 ಜನ ಹೆಣ್ಣು ಮಕ್ಕಳ ಮದುವೆ ಮಾಡಲು ಕೈ ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಅವರ ಮದುವೆ ಮಾಡಲು ಸಾಲ ಮಾಡಿದ್ದೆ ಎಂದು ನುಡಿಯುತ್ತಾರೆ. ನಾನು ಯಾವುದೇ ಸಾಲ ಮಾಡಿರಲಿಲ್ಲ, ಸಾಲವನ್ನು ನಮ್ಮ ತಂದೆಯವರು ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಮ್ಮ ತಂದೆಯವರು ದಿನಾಂಕ 05.01.1992 ರಲ್ಲಿ

ಬಸವೇಗೌಡರ ಮಕ್ಕಳಾದ ಚಿಕ್ಕಬಸವೇಗೌಡ ಮತ್ತು ಕೆಂಪೇಗೌಡರಿಗೆ ಬೋಗ್ಯ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯವರು 1996 ರಲ್ಲಿ ಮರಣ ಹೊಂದಿರುತ್ತಾರೆ.

3. ನಾನು ಮತ್ತು ನನ್ನ ಮಗ ಸಾತನೂರಿನಲ್ಲಿ ಒಂದು ದಿನಸಿ ಅಂಗಡಿಯನ್ನು ಇಟ್ಟುಕೊಂಡಿದ್ದೇವೆ ಎಂದರೆ ಸರಿ. ಅದೇ ಪ್ರಕಾರ ಮರಳವಾಡಿಯಲ್ಲಿ ನಿಮ್ಮ ಹೆಂಡತಿ ಮತ್ತು ಮಗಳು ಹೊಟೇಲ್ ಇಟ್ಟುಕೊಂಡಿದ್ದಾರೆ ಎಂದರೆ ಸಾಕ್ಷಿಯು ಪುಟ್ ಬಾತ್ ನಲ್ಲಿ ಇಟ್ಟುಕೊಂಡು ವ್ಯವಹಾರ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹೊಟೇಲ್ ಪುಟ್ ಬಾತ್ ನಲ್ಲಿ ಮಾಡುತ್ತಿಲ್ಲ ಅದನ್ನು ಅವರು ಒಂದು ಹೆಂಚಿನ ಮನೆಯಲ್ಲಿ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುತ್ತದೆ. ನನ್ನ ತಂದೆ ಮತ್ತು ತಾಯಿಯ ಮರಣದ ನಂತರ ನಮ್ಮ ಕುಟುಂಬದಲ್ಲಿ ಬಡ್ಡಿ ವ್ಯವಹಾರಗಳು ಹೆಚ್ಚಾಯಿತು ಎಂದರೆ ಸರಿ. ನನ್ನ ತಂದೆ ತಾಯಿಯ ಕಾಲದಲ್ಲಿ ನನಗೂ ಸಹ ಯಾವುದೇ ಕೆಲಸವಿಲ್ಲದೇ ಆದಾಯವಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ 6ನೇ ಪ್ರತಿವಾದಿಯು ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ.

4. ನನಗೆ ಯಾವುದೇ ಆದಾಯದ ಮೂಲ ಇಲ್ಲದೇ ಇರುವ ಕಾರಣ ನಾವು ಮೂರು ಜನ ಅಣ್ಣ ತಮ್ಮಂದಿರು ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳನ್ನು ದಿನಾಂಕ 31.01.2005 ರಂದು ನೊಂದಾಯಿತ ವಿಭಾಗ ಪತ್ರದ ಅಡಿಯಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ 31.01.2005 ರ ನೊಂದಾಯಿತ ವಿಭಾಗ ಪತ್ರದ ಮೊದಲನೇ ಪುಟದ ಎರಡನೇ ಪುಟದಲ್ಲಿರುವ ಸಾಕ್ಷಿಯ ಭಾವಚಿತ್ರವನ್ನು ತೋರಿಸಿ ಇದು ನೀವೇನಾ ಮತ್ತು ಈ ಸಹಿ ನಿಮ್ಮದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗ

O.S 253/2020
PW-1

ಪತ್ರಕ್ಕೆ ನಾನು ಸಹ ನೊಂದಾಣಾಧಿಕಾರಿ ಕಚೇರಿಗೆ ಹಾಜರಾಗಿ ನೊಂದಾಣಾಧಿಕಾರಿಯವರ ಮುಂದೆ ಸಹಿ ಹಾಕಿ ಆ ದಾಖಲೆಯನ್ನು ನೊಂದಣಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 31.01.2005 ರ ವಿಭಾಗ ಪತ್ರದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ಪ್ರಕಾರ ಆಸ್ತಿಗಳನ್ನು ಸಾಲ ಇದ್ದ ಕಾರಣಕ್ಕೆ ಅವುಗಳನ್ನು ವಿಲೇವಾರಿ ಮಾಡಿಕೊಂಡು ಸಾಲ ತೀರಿಸಿಕೊಳ್ಳಲು 6 ನೇ ಪ್ರತಿವಾದಿಗೆ ಆ ದಾಖಲೆಯಲ್ಲಿ ನಮೂದಾದ ಸಿ ಷೆಡ್ಯೂಲ್ ಸ್ವತ್ತನ್ನು ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ದಿನದಿಂದ ನಾನು ಒಟ್ಟು ಕುಟುಂಬದಿಂದ ಹೊರಬಂದಿರುತ್ತೇನೆ ಎಂದರೆ ಸರಿಯಲ್ಲ.

5. ಈಗ ದಾವಾ ಸ್ವತ್ತು 6 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ. ದಾವಾ ಸ್ವತ್ತು 6 ನೇ ಪ್ರತಿವಾದಿಯ ಹೆಸರಿಗೆ ಯಾವ ಆಧಾರದ ಮೇಲೆ ಬಂತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. 6 ನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಆದ ಖಾತೆ ಪಹಣಿಗಳ ವಿರುದ್ದ ನಾನು ಎಲ್ಲಿಯೂ ಅಪೀಲು ಸಲ್ಲಿಸಿರುವುದಿಲ್ಲ.

ಮುಂದುವರಿದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಆಲಿಸಿ ನೀಡಲಾಯಿತು.

ಓ ಹೇ ಕೇ ಸರಿ ಇದೆ

(ರಾಧಾ ಎಸ್ )
ಅ/ಭಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ .